ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಪೀಲು ಸ್ಥಾಯಿ ಸಮಿತಿಯ ದಿನಾಂಕ:04-1-2013ರಂದು ನಡೆದ ಸಭೆಯ ನಡವಳಿಗಳು

ಕ್ರಮ ಸಂಖ್ಯೆ	ಸದಸ್ಯರು ಹೆಸರು ಶ್ರೀಯುತರುಗಳಾದ	ಪದನಾಮ	ಹಾಜರಿದ್ದ ಅಧಿಕಾರಿಗಳು
01	ಪುಟ್ಟಮ್ಮ	ಅಧ್ಯಕ್ಷರು	ಅಧಿಕ ಕೌನ್ಸಿಲ್ ಕಾರ್ಯದರ್ಶಿ
02	ಬಿ.ಎಸ್.ಮಂಜುನಾಥ ರೆಡ್ಡಿ	ಸದಸ್ಯರು	ಸಲಹೆಗಾರರು
03	ಹೆಚ್.ಆರ್.ಕೃಷ್ಣಪ್ಪ	ಸದಸ್ಯರು	ಕಾನೂನು ಆಧಿಕಾರಿ
04	ಜಿ.ಹೆಚ್.ರಾಮಚಂದ್ರ	ಸದಸ್ಯರು	ಸಹಾಯಕ ಕಂದಾಯ ಅಧಿಕಾರಿಗಳು (ದೂಮ್ಮಲೂರು)
05	ಎಲ್.ರಮೇಶ್	ಸದಸ್ಯರು	ಕಂದಾಯ ಪರಿವೀಕ್ಷಕರು (ಕೆಂಪೇಗೌಡನಗರ)
06	ಸುಕಂದ	ಸದಸ್ಯರು	
07	ಎಂ.ಮುನಿಸ್ವಾಮಿ	ಸದಸ್ಯರು	
08	ಜಿ.ವರಲಕ್ಷ್ಮಿ	ಸದಸ್ಯರು	
09	ಎನ್.ಜಯಪಾಲ	ಸದಸ್ಯರು	
10	ಲಾವಣ್ಯ ಗಣೇಶ್ ರೆಡ್ಡಿ	ಸದಸ್ಯರು	
11	ಆಶಾ ಸುರೇಶ್	ಸದಸ್ಯರು	

(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

ವಿಷಯ:ಸಂಖ್ಯೆ:ಅಸ್ಥಾಸ/(ಕ)/20/2012-13: ಶ್ರೀ.ಸಂಪತ್ ಕುಮಾರ್ ಜಿ.ಪಿ.ಎ.ಹೋಲ್ಡರ್ ಅಫ್.ಪಿ.ಮೇರಿ ವೇರೋನಿಕಾ ಡಾಟರ್: ಅಫ್.ಅನ್ಸ್ತೀಷ್ಟೀಯ ಪಾಲ್ ಸ್ವತ್ತಿನ ಸಂಖ್ಯೆ: 405 ಅಸ್ಟಿನ್ ಟೌನ್ ವಾರ್ಡ್ ನಂ.114 ಬಾಡಿಗೆ ಗುತ್ತಿಗೆ ವರ್ಗಾವಣೆ ಮಾಡವುದಕ್ಕೆ ಸಂಬಂಧಿಸಿದಂತೆ ಸಹ ಕಂದಾಯಾಧಿಕಾರಿ (ದೂಮ್ಮಲೂರು) ವಲಯ ಇವರು ನೀಡಿರುವ ಅಂತಿಮ ಹಿಂಬರಹ ದಿನಾಂಕ: 23-6-2011ರ ವಿರುದ್ಧ ಮೇಲ್ಮನವಿ ಕುರಿತು.

ಪ್ರಕರಣವನ್ನು ಕರೆಯಲಾಯಿತು ಮನವಿದಾರರು ಹಾಜರಿದ್ದು ಪ್ರತಿವಾದಿ ಸಹ ಕಂದಾಯಾಧಿಕಾರಿ (ದೂಮ್ಮಲೂರು) ಶ್ರೀಮತಿ, ಸುಧಾ ಇವರು ಹಾಜರಿದ್ದು ಇದಕ್ಕೆ ಸಂಬಂಧಪಟ್ಟ ಮೂಲ ಕಡತವು ಆಯುಕ್ತರು ರವರಿಗೆ ಕಳುಹಿಸಲಾಗಿದ್ದು ಅಯುಕ್ತರವರ ಸಹಿ ಪಡೆದ ನಂತರ ಕಡವನ್ನು ಮಂಡಿಸುವುದಾಗಿ ಕೋರಿದ್ದರ ಮೇರೆಗೆ ಪ್ರಕರಣವನ್ನು ಮುಂದೂಡಿದೆ.

ವಿಷಯ:ಸಂಖ್ಯೆ:ಅಸ್ಥಾಸ/(ತೆ)/22/2012-13: ಅಪರ ಆಯುಕ್ತರು(ದಕ್ಷಿಣ)ರವರ ಟಪ್ಪಣಿ ದಿನಾಂಕ:31-10-2012ರ ರೀತ್ಯಾ ಸ್ವತ್ತಿನ ಸಂಖ್ಯೆ:12 ವಯ್ಯಪುರಿ ಲೇನ್,ಆರ್ಮುಗಂ ಮೊದಲಿಯಾರ್ ಸ್ಟ್ರೀಟ್,ಕಲಾಸಿಪಾಳ್ಯಂ, ಬೆಂಗಳೂರು-02. ವಾರ್ಡ್-119ರ ಖಾತೆಯು ಆರ್. ಪದ್ಮನಾಭನ್‌ರವರ ಹೆಸರಿನಲ್ಲಿ ದಾಖಲಾಗಿದ್ದು, ಸ್ವತ್ತಿನ ಒಟ್ಟು ಅಳತೆ 1200 ಚದರಡಿ ವಾರ್ಷಿಕ ಮೌಲ್ಯ ರೂ.27216 ವಸತಿ,34560 ವಸತಿಯೇತರ ಮೇಲೆ ದಾಖಲಿಸಲ್ಪಟ್ಟಿದೆ,ಖಾತೆದಾರರು ಸ್ವತ್ತಿನಲ್ಲಿ ನೆಲಮಾಳಿಗೆ ಪಾರ್ಕಿಂಗ್ 1000 ಚದರಡಿ ಹಾಗೂ 1ನೇ,2ನೇ

ಮತ್ತು 3ನೇ ಅಂತಸ್ತು ಒಟ್ಟು 3800 ಚದರಡಿಗಳ ಕಟ್ಟಡವಿದ್ದು ಸ್ವತ್ತಿಗೆ ಎಸ್.ಎ.ಎಸ್.ದರದಂತೆ ಸಾಮಾನ್ಯ ಪರಿಷ್ಕರಣೆ ಅಡಿಯಲ್ಲಿ ವಾರ್ಷಿಕ ಮೌಲ್ಯವನ್ನು 32704/- ವಸತಿಗಳಿಗೆ ಮತ್ತು 36500 ವಸತಿಯೇತರಗಳಿಗೆ ದಿನಾಂಕ:01-04-2008ರಿಂದ ಅನ್ವಯವಾಗುವಂತೆ ಪರಿಷ್ಕರಿಸಲಾಗಿರುತ್ತದೆ. ಕಂದಾಯ ನಿಗದಿ ಬಗ್ಗೆ ಪ್ರಥಮ ಅಪೀಲು ಅಧಿಕಾರಿಯವರಿಗೆ ಅಪೀಲು ಮನವಿ ಸಲ್ಲಿಸಿದ್ದರ ಮೇರೆಗೆ ಪ್ರಥಮ ಅಪೀಲು ಅಧಿಕಾರಿಯವರು ಸ್ವತ್ತಿನ ವಾರ್ಷಿಕ ಮೌಲ್ಯವನ್ನು ವಸತಿ ರೂ.32704/- ಗಳಿಂದ ರೂ.31360/-ಗಳಿಗೆ ಮತ್ತು ವಸತಿಯೇತರ ವಾರ್ಷಿಕ ಮೌಲ್ಯ ರೂ.36500/-ಗಳಿಂದ ರೂ.35000/- ಗಳಿಗೆ ನಿಗಧಿ ಪಡಿಸಿ ದಿನಾಂಕ:01-04-2008ರಿಂದ ಅನ್ವಯವಾಗುವಂತೆ ಕಡಿಮೆ ಮಾಡಿದ್ದು ವಿಶೇಷ ಸೂಚನಾಪತ್ರ ಜಾರಿಮಾಡಲಾಗಿರುತ್ತದೆ.

ಪ್ರಥಮ ಅಪೀಲು ಅಧಿಕಾರಿಯವರ ಆದೇಶದ ವಿಶೇಷ ಸೂಚನಾಪತ್ರ ಸ್ವೀಕರಿಸಿದ ಖಾತೆದಾರರು ಮನವಿ ಸಲ್ಲಿಸಿ ಸದರಿ ಕಟ್ಟಡವು ಸುಮಾರಿ 29 ವರ್ಷ ಹಳೆಯದ್ದಾಗಿದ್ದು ಕಟ್ಟಡದ ಅಳತೆ ಹಾಗೂ ಕಟ್ಟಡದ ವಯಸ್ಸು ಹಾಗೂ ಉಪಯೋಗಕ್ಕೆತಕ್ಕಂತೆ ಕಂದಾಯ ಕಡಿಮೆ ಮಾಡಲು ಕೋರಿರುತ್ತಾರೆ. ಅದುದರಿಂದ ಈ ಬಗ್ಗೆ ಸಮಿತಿಯ ಮುಂದಿನ ತೀರ್ಮಾನಕ್ಕಾಗಿ ಕಡತವನ್ನು ಟಿಪ್ಪಣಿಯೊಂದಿಗೆ ಮಂಡಿಸಲಾಗಿದೆ.

ಪ್ರಕರಣವನ್ನು ಕರೆಯಲಾಯಿತು ಮನವಿದಾರರು ಗೈರುಹಾಜರಾಗಿದ್ದು ಮತ್ತು ಪ್ರತಿವಾದಿಗಳು ಹಾಜರಿದ್ದು ಪ್ರತಿವಾದಿ ಕಂದಾಯ ಪರಿವೀಕ್ಷಕರು (ಕೆಂಪೇಗೌಡನಗರ) ಶ್ರೀ. ಮಾದೇಗೌಡ ಇವರು ಹಾಜರಿದ್ದು ಸಭೆಯ ತಿಳುವಳಿಕೆ ಪತ್ರವನ್ನು ಮನವಿದಾರರಿಗೆ ನೀಡಿರುವುದಿಲ್ಲವಾದರಿಂದ ಕಾಲಾವಕಾಶ ಕೋರಿರುತ್ತಾರೆ. ಅದುದರಿಂದ ಪ್ರಕರಣವನ್ನು ಮುಂದೂಡಿದೆ.

ವಿಷಯ:ಸಂಖ್ಯೆ:ಅಸ್ಥಾಸ/ 24/2012-13

ನಿರ್ಣಯ:- ದೇಶದ ಪ್ರಮುಖ ನಗರಗಳಲ್ಲಿನ ಕಂದಾಯ,ಆರೋಗ್ಯ ಜಾಹೀರಾತು ಮತ್ತು ಇತರೇ ಕ್ಷೇತ್ರಗಳಲ್ಲಿ ಆಳವಡಿಸಿಕೊಂಡಿರುವ ಆಧುನಿಕತೆಯ ಪ್ರಚಲಿತ ವಿದ್ಯಾಮಾನಗಳನ್ನು ಮತ್ತು ಪ್ರಗತಿಪರ ತಂತ್ರಜ್ಞಾನಗಳ ಮಾದರಿಗಳನ್ನು ಒಳಗೊಂಡಂತೆ ಹಾಗೂ ಜನಪ್ರತಿನಿಧಿಗಳ ಕಾರ್ಯನಿರ್ವಹಣಾ ಶೈಲಿಯ ಬಗ್ಗೆ ಆಧ್ಯಯನ ಮಾಡಲು ಅಪೀಲು ಸ್ಥಾಯಿ ಸಮಿತಿಯು, ಆಧ್ಯಕ್ಷರು, ಸಮಿತಿಯ ಎಲ್ಲಾ ಸದಸ್ಯರು, ಒಬ್ಬರು ಅಧಿಕಾರಿ ಹಾಗೂ ಸಮಿತಿಯ ಆಪ್ತ ಸಹಾಯಕರುಗಳನ್ನೊಳಗೊಂಡಂತೆ 2013ನೇ ಸಾಲಿನ ಫೆಬ್ರವರಿ ಮಾಹೆಯಲ್ಲಿ ಮುಂಬಯಿ, ಚಂಡೀಘಡ್, ಆಮೃತ್‌ಸರ, ಜಮ್ಮು ಮತ್ತು ಕಾಶ್ಮೀರ್ ದೆಹಲಿ ನಗರಗಳಿಗೆ ಭೇಟಿ ನೀಡಲು ಉದ್ದೇಶಿಸಿದ್ದು ಪ್ರವಾಸವನ್ನು ವಿಮಾನದಲ್ಲಿ ಕೈಗೊಳ್ಳಲು ಸಮಿತಿಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

(ಪುಟ್ಟಮ್ಮ)
ಅಧ್ಯಕ್ಷರು
ಅಪೀಲುಗಳ ಸ್ಥಾಯಿ ಸಮಿತಿ